**ಓ.ಎಸ್. ನಂಃ 217/2024**
**ಪಿ.ಡಬ್ಲ್ಯೂಃ 1**

**ದಿನಾಂಕ 25-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಕೆ ಎಂ ಪಿ ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

28 ಪಹಣಿ ಪತ್ರಿಕೆಗಳನ್ನು ನಿಪಿ-1 ರಿಂದ 28, ದಿನಾಂಕ 04.09.2024ರ ಗುರುಮಠಕಲ್ ತಹಸಿಲ್ದಾರ ರವರ ಆದೇಶದ ದೃಡೀಕೃತ ನಕಲು ಪ್ರತಿಯನ್ನು ನಿಪಿ-29, ದಿಃ 10.08.2024ರ ಗುರುಮಠಕಲ್ ಕಂದಾಯ ನಿರೀಕ್ಷಕರ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-30, ಭೂಮಿ ಅರ್ಜಿಯ ಸ್ವೀಕೃತಿ ದೃಡೀಕೃತ ನಕಲು ಪ್ರತಿಯನ್ನು ನಿಪಿ-31, ನಿಯಮ-46ರ ನಮೂನೆ ಪ್ರತಿಯ ದೃಡೀಕೃತ ನಕಲು ಪ್ರತಿಯನ್ನು ನಿಪಿ-32, ನಿಯಮ 65ರ ನೋಟಿಸಿನ ದೃಡೀಕೃತ ನಕಲು ಪ್ರತಿಯನ್ನು ನಿಪಿ-33, ವಾರಸಾ ವರ್ಗಾವಣೆ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-34, ಸಮರ್ಥನಾ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-35, ದಿನಾಂಕ 21.05.2024ರ ಒಪ್ಪಂದ ಕರಾರು ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-36, ದಿನಾಂಕ 22.05.2024ರ ಒಪ್ಪಂದ ಕರಾರು ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-37, ದಿನಾಂಕ 05.05.2024ರ ವಾರಸಾ ವರ್ಗಾವಣೆ ಅರ್ಜಿಯ ಎರಡು ದೃಡೀಕೃತ ನಕಲು ಪ್ರತಿಗಳನ್ನು ನಿಪಿ-38 ಮತ್ತು 39, ದಿನಾಂಕ 02.08.2024ರ ತಹಸಿಲ್ದಾರ

ರವರಿಟಗೆ ನೀಡಿದ ಅರ್ಜಿಯ ದೃಡೀಕೃತ ನಕಲು ಪ್ರತಿಯನ್ನು ನಿಪಿ-40, ದಿನಾಂಕ 02.09.2024ರ ತಹಸಿಲ್ದಾರ ನ್ಯಾಯಾಲಯದ ನೋಟಿಸಿನ ದೃಡೀಕೃತ ನಕಲು ಪ್ರತಿಯನ್ನು ನಿಪಿ-41, ದಿನಾಂಕ 17.08.2024ರ ಸ್ವೀಕೃತಿ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-42, ವಂಶವೃಕ್ಷದ ದೃಡೀಕೃತ ಪತ್ರವನ್ನು ನಿಪಿ-43, ಹಣಮಂತ ಹಾಗೂ ಯಲ್ಲಪ್ಪ ರವರ ಮರಣ ಪ್ರಮಾಣ ಪತ್ರಗಳ ನೋಟರಿ ಪ್ರತಿಗಳನ್ನು ನಿಪಿ-44 ಹಾಗೂ 45, ದಿನಾಂಕ 23.12.2024ರ ಗುರುಮಠಕಲ್ ತಹಸಿಲ್ದಾರ ಕಚೇರಿಯ ಹಿಂಬರಹವನು ನಿಪಿ-46 ಹಾಗೂ ಬೊಡಮ್ಮ ರವರ ಮರಣ ಪ್ರಮಾಣ ಪತ್ರದ ನೋಟರಿ ಪ್ರತಿಯನ್ನು ನಿಪಿ-47 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೊರಿದ್ದು ಸಕಾರಣ ಇಲ್ಲದಿರುವುದರಿಂದ ಹಾಗೂ ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಸಮಯ ನಿರಾಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**